159ನೇ ಅ

(06)

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀನಿರಾಣಿ ಹಣಮಂತ್ ರುದ್ರಪ್ಪ ಇವರ ನಿಯಮ-330ರಡಿ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

**ವಿಷಯ:**

ಕೃಷಿ ಅಧಿಕಾರಿ (AO) ಮತ್ತು ಸಹಾಯಕ ಕೃಷಿ ಅಧಿಕಾರಿ (AAO) ಹುದ್ದೆಗಳ ನೇಮಕಾತಿಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಹೊರಡಿಸಿರುವ ವೃಂದ ಮತ್ತು ನೇಮಕಾತಿ (C&R) ನಿಯಮಗಳ ತಿದ್ದುಪಡಿ ಇಲಾಖೆಯ ಗಮನಕ್ಕೆ ಬಂದಿದೆ. ಮೂಲ ಕೃಷಿ ಪದವೀಧರರನ್ನು ಹೊರತುಪಡಿಸಿ ಐಸಿಎಆರ್ (ICAR) ಮಾನ್ಯತೆ ಇಲ್ಲದ ರೈ-ಟೆಕ್ ಹಾಗೂ ಬಯೋಟೆಕ್ನಾಲಜಿ ಇಂಜಿನಿಯರಿಂಗ್ ಅಭ್ಯರ್ಥಿಗಳಿಗೆ ಅವಕಾಶ ನೀಡಿರುವುದನ್ನು ವಿರೋಧಿಸಿ ಬೆಂಗಳೂರಿನ ಜಿಕೆವಿಕೆ (GKVK) ಸೇರಿದಂತೆ ರಾಜ್ಯಾದ್ಯಂತ ಕೃಷಿ ವಿದ್ಯಾರ್ಥಿಗಳು ತೀವ್ರ ಪ್ರತಿಭಟನೆ ನಡೆಸುತ್ತಿದ್ದಾರೆ.

ಕೃಷಿ ಅಧಿಕಾರಿ ಹುದ್ದೆಗಳಿಗೆ ಕೇವಲ ಮೂಲ ಕೃಷಿ ಪದವೀಧರರು ಮಾತ್ರ ಅರ್ಹರು ಎಂಬ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಉಲ್ಲೇಖಿಸಿ ನಿಯಮಾವಳಿಗಳ ಉಲ್ಲಂಘನೆಯನ್ನು ಎತ್ತಿ ತೋರಿಸಲಾಗುತ್ತಿದೆ, ಹಾಗೂ ಈ ಅವೈಜ್ಞಾನಿಕ ನಿಯಮಗಳಿಂದ ಮೂಲ ಕೃಷಿ ಪದವೀಧರರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಹಾಗೂ ಪ್ರಸ್ತುತ ನಡೆಯುತ್ತಿರುವ 945 AO ಮತ್ತು AAO ಹುದ್ದೆಗಳ ನೇಮಕಾತಿಯಲ್ಲಿನ ಲೋಪದೋಷಗಳನ್ನು ತಕ್ಷಣವೇ ಸರಿಪಡಿಸಿ, ಕೃಷಿ ವಿದ್ಯಾರ್ಥಿಗಳ ಉದ್ಯೋಗಾವಕಾಶವನ್ನು ರಕ್ಷಿಸಲು.

**ಉತ್ತರ**:

ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಕೃಷಿ ಅಧಿಕಾರಿ (AO) ವೃಂದದ 128 ಹುದ್ದೆಗಳು ಮತ್ತು ಸಹಾಯಕ ಕೃಷಿ ಅಧಿಕಾರಿ (AAO) ವೃಂದದ 817 ಹುದ್ದೆಗಳು, ಒಟ್ಟು 945 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಅಧಿಸೂಚನೆ ಸಂಖ್ಯೆ: ಇಡಿ /ಕೆಇಎ /08 /ನೇ.ವಿ /2026 (ಆರ್‌ಪಿಸಿ) & ಸಂಖ್ಯೆ: ಇಡಿ/ ಕೆಇಎ /09 /ನೇ.ವಿ /2026 (ಕಕ), ದಿನಾಂಕ:30.05.2026ರಂದು ಹೊರಡಿಸಿ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 20.06.2026ರವರೆಗೆ ನಿಗದಿಪಡಿಸಲಾಗಿರುತ್ತದೆ.

ಕೃಷಿ ಆಯುಕ್ತರಿಂದ ಸ್ವೀಕೃತಗೊಂಡಿದ್ದ ಏಕ ಕಡತದಲ್ಲಿ RAI TECHNOLOGY UNIVERSITY ಯಲ್ಲಿ B.Sc (Agri) ಪದವಿ ಹೊಂದಿದ ವಿದ್ಯಾರ್ಥಿಗಳು ಸಹ ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ದಿನಾಂಕ:21.05.2026ರಲ್ಲಿ RAI TECHNOLOGY UNIVERSITY (UGC APPROVED)ಯು ಕರ್ನಾಟಕ ACT 40/2013ರನ್ವಯ ಸ್ಥಾಪನೆಗೊಂಡಿದ್ದು, ಸದರಿ ವಿಶ್ವವಿದ್ಯಾಲಯದಿಂದ B.Sc (Agri) ಪದವಿಯನ್ನು ಪಡೆದಿರುವ ವಿದ್ಯಾರ್ಥಿಗಳನ್ನು ಸಹ ಕೃಷಿ ಇಲಾಖೆಯ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿರುತ್ತದೆ. ಸದರಿ ಸರ್ಕಾರದ ಪತ್ರದನ್ವಯ ಇಲಾಖೆಯಿಂದ ಅಧಿಕೃತ ಜ್ಞಾಪನ ಹೊರಡಿಸಿರುವುದರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ದಿನಾಂಕ:01.06.2026ರಂದು ಸೇರ್ಪಡೆ ಅಧಿಸೂಚನೆ ಹೊರಡಿಸಿ RAI TECHNOLOGY UNIVERSITY ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 279 ಟಿಇಸಿ 2026, ದಿನಾಂಕ:19.06.2026ರಲ್ಲಿ ಬಿ.ಇ ಬಯೋಟೆಕ್ನಾಲಜಿ ಪದವಿಯನ್ನು ಉನ್ನತ ಶಿಕ್ಷಣ, ಉದ್ಯೋಗ, ಶೈಕ್ಷಣಿಕ ಪ್ರಗತಿ ಹಾಗೂ ಇತರ ಸಂಬಂಧಿತ ಅಧಿಕೃತ ಅವಶ್ಯಕತೆಗಳ ಉದ್ದೇಶಕ್ಕಾಗಿ ಬಿ.ಟೆಕ್ ಬಯೋಟೆಕ್ನಾಲಜಿ ಪದವಿಗೆ ಶೈಕ್ಷಣಿಕವಾಗಿ ಸಮನವಾಗಿ ಪರಿಗಣಿಸತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ:AGRI/242/AGS/2026, ದಿನಾಂಕ:19.06.2026ರಲ್ಲಿ ಈಗಾಗಲೇ ನಿಗದಿಪಡಿಸಿರುವ ಕೊನೆಯ ದಿನಾಂಕ: 20.06.2026ನ್ನು ದಿನಾಂಕ:25.06.2026ರವರೆಗೆ ಮುಂದೂಡುವಂತೆ ನಿರ್ದೇಶಿಸಲಾಗಿರುತ್ತದೆ. ಸದರಿ ಅಧಿಸೂಚನೆ ಹಾಗೂ ಸರ್ಕಾರದ ಪತ್ರದನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ದಿನಾಂಕ:20.06.2026ರಂದು ಸೇರ್ಪಡೆ ಅಧಿಸೂಚನೆ ಹೊರಡಿಸಿಬಿ.ಇ ಬಯೋಟೆಕ್ನಾಲಜಿ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ, ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕವನ್ನು 25.06.2026ರವರೆಗೆ ವಿಸ್ತರಿಸಲಾಗಿರುತ್ತದೆ.

ಕರ್ನಾಟಕ ಕೃಷಿ ಪದವೀಧರ ಅಧಿಕಾರಿಗಳ ಸಂಘ, ಅಲುಮ್ನಿ ಅಸೋಶಿಯೇಷನ್, ಬೆಂಗಳೂರು All India Agricultural Students Associations (AIASA)ಮತ್ತು ಕೃಷಿ ಪದವೀಧರ ವಿದ್ಯಾರ್ಥಿಗಳು ಮನವಿ ಸಲ್ಲಿಸಿ RAI TECHNOLOGY UNIVERSITY ವಿದ್ಯಾರ್ಥಿಗಳಿಗೆ ಮತ್ತು ಬಿ.ಇ ಬಯೋಟೆಕ್ನಾಲಜಿ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ವಿರೋದಿಸಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಮನವಿ ಸಲ್ಲಿಸಿರುತ್ತಾರೆ. ಅಲ್ಲದೇ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಸ್ವಾತಂತ್ರ್ಯ ಉದ್ಯಾನವನ, ಬೆಂಗಳೂರು ಇಲ್ಲಿ ವಿದ್ಯಾರ್ಥಿಗಳು ಧರಣಿ ನಡೆಸಿರುತ್ತಾರೆ.

ಸರ್ಕಾರದ ನಿರ್ದೇಶನದನ್ವಯ ದಿನಾಂಕ:06.08.2026ರಂದು ಕರ್ನಾಟಕ ಪರೀಕ್ಷಾಪ್ರಾಧಿಕಾರಕ್ಕೆ ಪತ್ರ ಬರೆದು, ನೇಮಕಾತಿ ಅಧಿಸೂಚನೆ ದಿನಾಂಕ:30.05.2026ಅನ್ನು ಹಿಂಪಡೆಯಲು ಸೂಚಿಸಿರುವಂತೆ ಕರ್ನಾಟಕ ಪರೀಕ್ಷಾಪ್ರಾಧಿಕಾರ ದಿನಾಂಕ:07.08.2026 ರಂದು ಅಧಿಸೂಚನೆ ಹೊರಡಿಸಿ ದಿನಾಂಕ:30.05.2026ರ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆದು ದಿನಾಂಕ 08.08.2026 ಮತ್ತು 09.08.2026ರಂದು ನಿಗದಿಪಡಿಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮುಂದೂಡಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: AGRI/433/AGS/2025 ದಿನಾಂಕ:07-08-2026 ರಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದ ಹುದ್ದೆಗಳಿಗೆ ನಿಗದಿಪಡಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಬಗ್ಗೆ ವಿದ್ಯಾರ್ಥಿಗಳು ಆಕ್ಷೇಪಣೆ ವ್ಯಕ್ತಪಡಿಸಿರುವ ಹಿನ್ನಲೆಯಲ್ಲಿ, ಕೃಷಿ ಇಲಾಖೆಯ (ವೃಂದ ಮತ್ತು ನೇಮಕಾತಿ) ನಿಯಮಾವಳಿ 2021ನ್ನು ಪರಿಷ್ಕರಿಸಲು ಈ ಕೆಳಕಂಡಂತೆ ಸಲಹಾ ಸಮಿತಿ ರಚಿಸಿ 15 ದಿನಗಳೊಳಗಾಗಿ ಸರ್ಕಾರಕ್ಕೆ ವರದಿ ನೀಡುವಂತೆ ಸೂಚಿಸಲಾಗಿರುತ್ತದೆ.

| | | |
|---|---|---|
| 1. | ಕೃಷಿ ಆಯುಕ್ತರು | ಸಮಿತಿ ಅಧ್ಯಕ್ಷರು |
| 2. | ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು | ಸದಸ್ಯರು |
| 3. | ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ | ಸದಸ್ಯರು |
| 4. | ಕೃಷಿ ನಿರ್ದೇಶಕರು | ಸಮಿತಿಯ ಸದಸ್ಯ ಕಾರ್ಯದರ್ಶಿಗಳು |

ಸಮಿತಿಯ ವರದಿಯನ್ನಾಧರಿಸಿ ಕೃಷಿ ಇಲಾಖೆಯ ವೃಂದ ಮತ್ತು ನೇಮಕಾತಿ (C&R) ನಿಯಮಗಳು 2021ನ್ನು ಪರಿಶೀಲಿಸಿ ಸಕ್ಷಮಪ್ರಾಧಿಕಾರದ ಅನುಮೋದನೆಯೊಂದಿಗೆ ಪರಿಷ್ಕರಿಸಿದ ನಂತರ ಕೃಷಿ ಅಧಿಕಾರಿ(AO) ಮತ್ತು ಸಹಾಯಕ ಕೃಷಿ ಅಧಿಕಾರಿ(AAO) ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು

P. M. Narendraswamy

**(ನರೇಂದ್ರ ಸ್ವಾಮಿ)**
ಕೃಷಿ ಸಚಿವರು

**ಸಂಖ್ಯೆ:AGRI/285/AGS/2026**